ಅ) ಮಂಜೂರಾದ ಶಿಕ್ಷಕರ ಸಂಖ್ಯೆಗಿಂತ ಕಡಿಮೆ ಶಿಕ್ಷಕರಿರುವ ಶಾಲೆಗಳೆಷ್ಟು ? (ಗ್ರಾಮಗಳ ಹೆಸರುಗಳನ್ನು ಕೊಡುವುದು?

ಇ) ಕಡಿಮೆ ಇರುವ ಸ್ಥಳಗಳಿಗೆ ಶಿಕ್ಷಕರನ್ನು ಕೂಡಲೇ ನೇಮಕ ಮಾಡಲಾಗುವುದೇ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು)

ಅ) ೩೫ (ಹಿರಿಯ ಪ್ರಾಥಮಿಕ ಶಾಲೆಗಳು).

೩೯. (ಕಿರಿಯ ಪ್ರಾಥಮಿಕ ಶಾಲೆಗಳು).

ಆ) ೧೪.

ಕಡಿಮೆ ಶಿಕ್ಷಕರಿರುವ ಗ್ರಾಮಗಳ ಶಾಲೆಗಳ ಪಟ್ಟಿ

೧) ಕಿರಿಯ ಪ್ರಾಥಮಿಕ ಶಾಲೆ, ಬಡಮಲ್ಲಿ.

೨) ಹಿರಿಯ ಪ್ರಾಥಮಿಕ ಶಾಲೆ, ಕುರ್ದಕೋಡಿಹಳ್ಳಿ.

೩) ಹಿರಿಯ ಪ್ರಾಥಮಿಕ ಶಾಲೆ, ಮುತ್ತೂರು.

೪) ಹಿರಿಯ ಪ್ರಾಥಮಿಕ ಶಾಲೆ, ತೆರವಾಡಿ.

೫) ಹಿರಿಯ ಪ್ರಾಥಮಿಕ ಶಾಲೆ, ಚಿನ್ನಿರಟ್ಟಿ.

೬) ಮಾದರಿ ಪ್ರಾಥಮಿಕ ಶಾಲೆ, ಸೂಡಂಬ.

೭) ಕನ್ನಡ ಹೆಣ್ಣು ಮಕ್ಕಳ ಶಾಲೆ. ಮಲ್ಲೂರ.

೮) ಕನ್ನಡ ಗಂಡು ಮಕ್ಕಳ ಶಾಲೆ, ಹಿಡಿಗೊಂಡ (ಪಿ. ೧೦,

೯) ಹಿರಿಯ ಪ್ರಾಥಮಿಕ ಶಾಲೆ. ಬಿಕ್ಕಳ್ಳಿ.

೧೦) ಕಿರಿಯ ಪ್ರಾಥಮಿಕ ಶಾಲೆ, ಚಿಕ್ಕಬಾಸೂರ,

೧೧) ಕನ್ನಡ ಗಂಡುಮಕ್ಕಳ ಶಾಲೆ, ಹಳೆಗುಂಗರ ತೊಪ್ಪ.

೧೨) ಮಾದರಿ ಪ್ರಾಥಮಿಕ ಶಾಲೆ ಬ್ಯಾಡಗಿ (ಪಿ. ೧೧).

೧೩) ಮಾದರಿ ಪ್ರಾಥಮಿಕ ಶಾಲೆ. ಮೊಟೆಬೆನ್ನೂರು (ಪಿ. ೧೨.)

೧೪) ಉರ್ದು ಗಂಡುಮಕ್ಕಳ ಶಾಲೆ, ಚಿಕ್ಕಬಾಸೂರ.

೫) ಈ ಹುದ್ದೆಗಳನ್ನು ಜಿಲ್ಲಾ ಆಯ್ಕೆ ಸಮಿತಿಯಿಂದ ತುಂಬಲು ಸರ್ಕಾರ ಕ್ರಮ ಕೈಗೊಳ್ಳಲಿದೆ.

ಶ್ರೀ ಕೆ. ಎಸ್. ಬೀಳಗಿ —ಮಾನ್ಯ ಅಧ್ಯಕ್ಷರೇ ಬ್ಯಾಡಗಿ ತಾಲ್ಲೂಕಿನಲ್ಲಿ ಸ್ವಂತ ಕಟ್ಟಡಗಳಿರುವ ಎಷ್ಟು ಹಿರಿಯ ಹಾಗೂ ಕಿರಿಯ ಪ್ರಾಥಮಿಕ ಶಾಲೆಗಳು ಇವೆ?

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಕೆ. ಎಸ್. ಬೀಳಗಿ —ರಾಜ್ಯದಲ್ಲಿ ಎಷ್ಟು ಶಾಲೆಗಳಿಗೆ ಕಟ್ಟಡಗಳು ಇವೆ?

ಶ್ರೀ ಡಿ. ಮಂಜುನಾಥ್.—ಮಾನ್ಯ ಸದಸ್ಯರು ಬೇರೆ ಪ್ರಶ್ನೆಯೆಂನ್ನು ಕಳುಹಿಸಿ ಕೊಟ್ಟರೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಗುಲ್ಬರ್ಗ ತಾಲ್ಲೂಕಿನಲ್ಲಿರುವ ಫರ್ತಾಬಾದ್ ಕಿರಿಯ ಕಾಲೇಜು ಹಾಗೂ ಪ್ರೌಢಶಾಲಾ ಕಟ್ಟಡಗಳು

೧೯೮. ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್) —ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸರ್ಕಾರಿ ಕಿರಿಯ ಕಾಲೇಜು ಮತ್ತು ಪ್ರೌಢಶಾಲೆಗಳು ಎಷ್ಟು. (ಜಿಲ್ಲಾವಾರು ವಿವರ).

ಆ) ಇವುಗಳಲ್ಲಿ ಎಷ್ಟು ಕಿರಿಯ ಕಾಲೇಜು ಮತ್ತು ಪ್ರೌಢಶಾಲೆಗಳು ತಮ್ಮದೇ ಆದಂತ ಕಟ್ಟಡಗಳನ್ನು ಪಡೆದಿವೆ ಮತ್ತು ಇವುಗಳಿಗಾಗಿ ಪ್ರತಿಯೊಂದು ಕಿರಿಯ ಕಾಲೇಜು ಮತ್ತು ಪ್ರೌಢಶಾಲೆಗಳಿಗೆ ತಗಲುವ ಸರ್ಕಾರದ ಸರಾಸರಿ ವೆಚ್ಚ ಎಷ್ಟು.

ಇ) ರಾಜ್ಯದಲ್ಲಿ ಎಷ್ಟು ಪ್ರೌಢಶಾಲೆಗಳನ್ನು ಖಾಸಗಿ ಸಂಸ್ಥೆಗಳು ನಡೆಸುತ್ತಿವೆ (ಜಿಲ್ಲಾವಾರು ವಿವರ).

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಆ) ಸ್ವತಂತ್ರ ಕಿರಿಯ ಕಾಲೇಜು ... ೧೭
ಸಂಯುಕ್ತ ಕಿರಿಯ ಕಾಲೇಜ್ ... ೩೬೪
ಪ್ರೌಢಶಾಲೆಗಳಂ ... ೧೪೨೦

ಸದರಿ ಕಿರಿಯ ಕಾಲೇಜುಗಳು ಮೇಲಿನ ೧೪೨೦ ಪ್ರೌಢಶಾಲೆಗಳಲ್ಲಿ ಸಮ್ಮಿಳಿತಗೊಂಡಿರುತ್ತವೆ. (ಜಿಲ್ಲಾವಾರು ವಿವರ ಲಗತ್ತಿಸಿದೆ).

ಆ) ಕಿರಿಯ ಕಾಲೇಜು ಮತ್ತು ಪ್ರೌಢಶಾಲೆಗಳು ... ೭೦೯
(ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ) ಒಂದು ಕಟ್ಟಡಕ್ಕೆ ೬ ಲಕ್ಷ ರೂ. ಖರ್ಚಾಗುತ್ತದೆ.

ಇ) ೨೬೫೭.

ಜಿಲ್ಲಾವಾರು ಸರ್ಕಾರಿ ಪ್ರೌಢಶಾಲೆಗಳು ಹಾಗೂ ಕಿರಿಯ ಕಾಲೇಜುಗಳ ಪಟ್ಟಿ

		ಪ್ರೌಢಶಾಲೆಗಳು	ಸಂಯುಕ್ತ ಕಿರಿಯ ಕಾಲೇಜುಗಳು
೧	ಬೆಂಗಳೂರು	೧೦೧	೨೯
೨	ಕೋಲಾರ	೯೨	೧೪
೩	ಶಿವಮೊಗ್ಗ	೯೩	೨೪
೪	ತುಮಕೂರು	೮೪	೨೨
೫	ಚಿತ್ರದುರ್ಗ	೮೧	೨೪
೬	ಮೈಸೂರು	೧೧೨	೩೦
೭	ಕೊಡಗು	೨೧	೫
೮	ಮಂಡ್ಯ	೬೯	೧೭
೯	ಹಾಸನ	೧೧೨	೨೯
೧೦	ಚಿಕ್ಕಮಗಳೂರು	೪೩	೧೬
೧೧	ದಕ್ಷಿಣ ಕನ್ನಡ ಜಿಲ್ಲೆ	೧೧೮	೪೫
೧೨	ಬೆಳಗಾಂ	೪೧	೫
೧೩	ಧಾರವಾಡ	೬೮	೭
೧೪	ಬಿಜಾಪುರ	೪೧	೮
೧೫	ಉತ್ತರ ಕನ್ನಡ ಜಿಲ್ಲೆಯಲ್ಲಿ	೩೩	೬
೧೬	ಗಂಲ್ಬರ್ಗಾ	೧೨೫	೩೪
೧೭	ರಾಯಚೂರು	೭೮	೨೧
೧೮	ಬಳ್ಳಾರಿ	೫೧	೧೪
೧೯	ಬೀದರ್	೫೭	೧೪
	ಒಟ್ಟು	೧೪೨೦	೩೬೪

ರಾಜ್ಯದಲ್ಲಿ ಕಿರಿಯ ಕಾಲೇಜು ಹಾಗೂ ಪ್ರೌಢಶಾಲೆಗಳಿಗೆ ಸ್ವಂತ ಕಟ್ಟಡಗಳಿರುವ ಸಂಖ್ಯೆ

	ಜಿಲ್ಲೆಯ ಹೆಸರು	ಸ್ವಂತ ಕಟ್ಟಡಗಳಿರುವ ಕಿರಿಯ ಕಾಲೇಜು ಹಾಗೂ ಪ್ರೌಢಶಾಲೆಗಳ ಸಂಖ್ಯೆ
ಬೆಂಗಳೂರು ವಿಭಾಗ :		
೧	ಬೆಂಗಳೂರು ಉತ್ತರ ಜಿಲ್ಲೆ	೨೦
೨	ಬೆಂಗಳೂರು ದಕ್ಷಿಣ ಜಿಲ್ಲೆ	೯
೩	ಬೆಂಗಳೂರ ಗ್ರಾಮಾಂತರ ಜಿಲ್ಲೆ	೨೧
೪	ಚಿತ್ರದುರ್ಗ	೬೪
೫	ತುಮಕೂರು	೪೩
೬	ಶಿವಮೊಗ್ಗ	೫೫
೭	ಕೋಲಾರ	೪೬
		೨೩೮
ಮೈಸೂರು ವಿಭಾಗ :		
೧	ಮೈಸೂರು	೬೪
೨	ಹಾಸನ	೬೩
೩	ಚಿಕ್ಕಮಗಳೂರು	೨೭
೪	ಕೊಡಗು	೭
೫	ದಕ್ಷಿಣ ಕನ್ನಡ ಜಿಲ್ಲೆ	೭೯
೬	ಮಂಡ್ಯ	೩೦
		೨೭೦
ಬೆಳಗಾಂ ವಿಭಾಗ :		
೧	ಬೆಳಗಾಂ	೫
೨	ಉತ್ತರ ಕನ್ನಡ ಜಿಲ್ಲೆ	೧೬
೩	ಬಿಜಾಪುರ	೧೬
೪	ಧಾರವಾಡ	೮
		೪೫
ಗುಲ್ಬರ್ಗಾ ವಿಭಾಗ :		
೧	ಗುಲ್ಬರ್ಗಾ	೫೦
೨	ಬಳ್ಳಾರಿ	೩೨
೩	ರಾಯಚೂರು	೪೧
೪	ಬೀದರ್	೩೩
		೧೫೬

ರಾಜ್ಯದಲ್ಲಿ ಒಟ್ಟು ಸ್ವಂತ ಕಟ್ಟಡವಿರುವ ಕಿರಿಯ ಕಾಲೇಜು ಮತ್ತು ಪ್ರೌಢ ಶಾಲೆಗಳ ಸಂಖ್ಯೆ ೭೦೯.

ಜಿಲ್ಲಾವಾರು ಖಾಸಗಿ ಪ್ರೌಢಶಾಲೆಗಳು.

೧	ಬೆಂಗಳೂರು ಉತ್ತರ ಜಲ್ಲೆ	...	೧೭೬
೨	ಬೆಂಗಳೂರು ದಕ್ಷಿಣ ಜಿಲ್ಲೆ	...	೧೭೭
೩	ಬೆಂಗಳೂರು ಗ್ರಾಮಾಂತರ ಜಿಲ್ಲೆ	...	೧೦೯
೪	ಕೋಲಾರ	..	೮೧
೫	ಶಿವಮೊಗ್ಗ	...	೧೧೧
೬	ತುಮಕೂರು	...	೨೪೪
೭	ಚಿತ್ರದುರ್ಗ	...	೧೯೦
೮	ಮೈಸೂರು	...	೧೦೯
೯	ಕೊಡಗು	...	೪೩
೧೦	ಮಂಡ್ಯ	...	೬೭
೧೧	ಹಾಸನ	...	೧೧೪
೧೨	ಚಿಕ್ಕಮಗಳೂರು	...	೯೬
೧೩	ದಕ್ಷಿಣ ಕನ್ನಡ ಜಿಲ್ಲೆ	...	೧೩೭
೧೪	ಬೆಳಗಾಂ	...	೨೪೮
೧೫	ಧಾರವಾಡ	...	೨೦೪
೧೬	ಬಿಜಾಪುರ	...	೧೪೪
೧೭	ಉತ್ತರ ಕನ್ನಡ ಜಿಲ್ಲೆ	...	೧೨೪
೧೮	ಗುಲ್ಬರ್ಗಾ	...	೬೬
೧೯	ಬಳ್ಳಾರಿ	...	೭೨
೨೦	ರಾಯಚೂರು	...	೩೭
೨೧	ಬೀದರ್	...	೬೮
		ಒಟ್ಟು	೨೬೫೭

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಕೊಟ್ಟಿರುವ ಹೇಳಿಕೆಯ ಪ್ರಕಾರ ಸುಮಾರು ೧೭೮೪ ಜೂನಿಯರ್ ಕಾಲೇಜುಗಳು ಮತ್ತು ಪ್ರೌಢಶಾಲೆಗಳು ಇವೆ. ಅವರು ತಮ್ಮ ಹೇಳಿಕೆಯಲ್ಲಿ ಡಿವಿಜನ್ ವೈಜ್ ಸಹ ಕೊಟ್ಟಿದ್ದಾರೆ. ಇದರಲ್ಲಿ ಸುಮಾರು ೭೦೯ ಸರ್ಕಾರಿ ಶಾಲೆಗಳಿಗೆ ಮಾತ್ರ ಶಾಲಾ ಕಟ್ಟಡಗಳು ಇವೆ. ಇನ್ನು ಉಳಿದ ಶಾಲೆಗಳಿಗೆ ಸರ್ಕಾರಿ ಕಟ್ಟಡಗಳು ಇಲ್ಲ. ತಾವೇ ಹೇಳಿದ ಪ್ರಕಾರ ಒಂದು ಶಾಲಾ ಕಟ್ಟಡಕ್ಕೆ ಸುಮಾರು ೬ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಆ ಪ್ರಕಾರ ನಾವು ಲೆಕ್ಕಾಚಾರ ಮಾಡಿದರೆ ಕೋಟ್ಯಾಂತರ ರೂಪಾಯಿಗಳ ಹಣ ಬೇಕಾಗುತ್ತದೆ. ಇಷ್ಟು ಹಣವನ್ನು ತಾವು ಯಾವಾಗ ಒದಗಿಸಿಕೊಂಡು ಶಾಲಾ ಮಕ್ಕಳಿಗೆ ಸರಿಯಾದ ವ್ಯವಸ್ಥಿತ ರೀತಿಯಲ್ಲಿ ಶಿಕ್ಷಣವನ್ನು ಕೊಡುತ್ತೀರಿ ? ಎರಡನೆಯದಾಗಿ ಗುಲ್ಬರ್ಗಾ ಡಿವಿಜನ್‌ನಲ್ಲಿ ಸುಮಾರು ೫೯ ಜೂನಿಯರ್ ಕಾಲೇಜುಗಳು ಮತ್ತು ಪ್ರೌಢಶಾಲೆಗಳು ಇದ್ದು ಇದರಲ್ಲಿ ಸುಮಾರು ೧೫೬ ಶಾಲೆಗಳಿಗೆ ಮಾತ್ರ ಸ್ವಂತ ಕಟ್ಟಡಗಳು ಇವೆ. ಅದೇ ರೀತಿ ಬೇರೆ ಡಿವಿಜನ್ ತೆಗೆದುಕೊಂಡರೆ, ಉದಾಹರಣೆಗೆ, ಬೆಂಗಳೂರು ಡಿವಿಜನ್‌ನಲ್ಲಿ ಸುಮಾರು ೨೩೮ ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಟ್ಟಿದ್ದೀರಿ. ಮೈಸೂರು ಡಿವಿಜನ್‌ನಲ್ಲಿ ಸುಮಾರು ೨೭೦ ಸ್ವಂತ ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಟ್ಟಿದ್ದೀರಿ. ಅದೇ ಗುಲ್ಬರ್ಗಾ ಜಿಲ್ಲೆಗೆ ಮಾತ್ರ ತಾರತಮ್ಯ ಮಾಡಿದ್ದೀರಿ? ಇದು ಏತಕ್ಕೆ? ಈ ತಾರತಮ್ಯವನ್ನು ಯಾವ ರೀತಿಯಲ್ಲಿ

ಸರಿದೂಗಿಸುತ್ತೀರಿ? ನಮ್ಮ ಡಿವಿಜನ್‌ಗೆ ಸುಮಾರು ೧೦೦ ಸ್ವಂತ ಕಟ್ಟಡಗಳಷ್ಟು ತಾರತಮ್ಯವನ್ನು ತೋರಿಸಿದ್ದೀರಿ? ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು?

ಶ್ರೀ ಡಿ. ಮಂಜುನಾಥ್.--ಮಾನ್ಯ ಅಧ್ಯಕ್ಷರೇ ಕಟ್ಟಡಗಳನ್ನು ಕಟ್ಟಿಸುವ ಸಲುವಾಗಿ ಈ ವರ್ಷ ನಾವು ಬಡ್ಜೆಟ್‌ನಲ್ಲಿ ಸ್ವಲ್ಪ ಜಾಸ್ತಿ ಹಣವನ್ನು ಇಟ್ಟಿದ್ದೇವೆ. ಒಂದೇ ಸಲ ಎಲ್ಲಾ ಕಡೆ ಕಟ್ಟಡಗಳನ್ನು ಕಟ್ಟಿಸಬೇಕಾದರೆ ಕಷ್ಟವಾಗುತ್ತದೆ. ಎನ್.ಆರ್.ಇ.ಪಿ. ಮತ್ತು ಆರ್.ಎಲ್.ಇ.ಜಿ.ಪಿ. ಯೋಜನೆಯ ಅಡಿಯಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸುವಂತೆ ಕ್ರಮ ಕೈಗೊಂಡಿದ್ದೇವೆ. ಹಂತ ಹಂತವಾಗಿ ಎಲ್ಲಾ ಕಡೆಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಡಲಾಗುವುದು. ಕಳೆದ ವರ್ಷಕ್ಕಿಂತ ಈ ವರ್ಷ ಈ ಬಾಬಿಗೆ ಸ್ವಲ್ಪ ಜಾಸ್ತಿ ಹಣವನ್ನು ಇಟ್ಟಿದ್ದೇವೆ ಗುಲ್ಬರ್ಗಾ ಜಿಲ್ಲೆಗೆ ತಾರತಮ್ಯವಾಗಿದೆ ಎಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೋ ಆ ಬಗ್ಗೆ ವಿಚಾರಣೆ ಮಾಡಿ ಆಗಿರುವಂತಹ ತಾರತಮ್ಯವನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.--ತಾವು ಕೊಟ್ಟಿರತಕ್ಕಂಥ ಹೇಳಿಕೆಯಲ್ಲಿಯೇ ಇದೆ. ಅದನ್ನು ಮತ್ತೆ ವಿಚಾರ ಮಾಡತಕ್ಕಂಥ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಡಿ. ಮಂಜುನಾಥ್.--ಇದರಲ್ಲಿ ಜಾಸ್ತಿ ಮತ್ತು ಕಡಿಮೆ ಎನ್ನುವ ಪ್ರಶ್ನೆ ಬರುವುದಿಲ್ಲ. ಹಂತ ಹಂತವಾಗಿ ಎಲ್ಲಾ ಕಡೆ ಶಾಲಾ ಕಟ್ಟಡಗಳನ್ನು ಒದಗಿಸಿಕೊಡಲಾಗುವುದು. ಈ ವರ್ಷ ನಾವು ಈ ಬಾಬಿಗೆ ಜಾಸ್ತಿ ಹಣವನ್ನು ಇಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.--ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ತಾರತಮ್ಯವಾಗಿದೆ ಎಂದು ನೇರವಾಗಿ ತಮ್ಮ ಮೇಲೆ ಆಪಾದನೆ ಮಾಡುತ್ತಿದ್ದಾರೆ. ಆದ್ದರಿಂದ ತಾವು ನೇರವಾಗಿ ಉತ್ತರ ಕೊಡುವುದು ಒಳ್ಳೆಯದು. ಯಾವಾಗ ಈ ತಾರತಮ್ಯವನ್ನು ಸರಿದೂಗಿಸುತ್ತೀರಿ ಎಂದು ಖಚಿತವಾಗಿ ಹೇಳಿ.

ಶ್ರೀ ಡಿ. ಮಂಜುನಾಥ್.--ನಾನು ನೇರವಾಗಿಯೇ ಉತ್ತರ ಹೇಳಿದ್ದೇನೆ. ಮುಂದಿನ ಸಲ ಗುಲ್ಬರ್ಗಾ ಜಿಲ್ಲೆಗೆ ಹೆಚ್ಚಿನ ಹಣ ಕೊಡುವುದಕ್ಕೆ ಪ್ರಯತ್ನ ಮಾಡೋಣ.

ಅಧ್ಯಕ್ಷರು.--ಪ್ರಶ್ನೆ ಸಂಖ್ಯೆ. ೬(೭೩) ಮತ್ತು ಪ್ರಶ್ನೆ ಸಂಖ್ಯೆ. ೭(೨೬೫) ಮಾನ್ಯ ಸದಸ್ಯರ ಪ್ರಶ್ನೆಗಳನ್ನು ಮುಂದೂಡಲಾಗಿದೆ.

ಶ್ರೀ ಹೆಚ್.ಡಿ. ದೇವೇಗೌಡ.--ಮಾನ್ಯ ಅಧ್ಯಕ್ಷರೇ ಈ ಪ್ರಶ್ನೆಯನ್ನು ಮುಂದೂಡುವಂತೆ ನಾನು ತಮಗೆ ಪತ್ರ ಬರೆದಿದ್ದೆ. ಆದರೆ ಮುಂದೂಡುವಂತಹ ಅವಶ್ಯಕತೆ ಇಲ್ಲ. ಈಗಲೇ ನಾನು ಮಾನ್ಯ ಸದಸ್ಯರು ಪ್ರಶ್ನೆಗಳಿಗೆ ಉತ್ತರ ಹೇಳಿ ಎಂದರೆ ಹೇಳುತ್ತೇನೆ.

ಅಧ್ಯಕ್ಷರು.--ತಾವು ರೆಡಿಯಾಗಿದ್ದರೆ ಉತ್ತರ ಹೇಳಿ.

ಶ್ರೀ ಹೆಚ್. ಡಿ. ದೇವೇಗೌಡ.--ಮಾನ್ಯ ಸದಸ್ಯರು ರಾಜ್ಯದ ಎಲ್ಲಾ ತಾಲ್ಲೂಕು ಪ್ರವಾಸಿ ಮಂದಿರಗಳಲ್ಲಿ ದೂರವಾಣಿ ವ್ಯವಸ್ಥೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ಬಗ್ಗೆ ಹೇಳುವುದಾದರೆ ಕೆಲವು ಪ್ರವಾಸಿ ಮಂದಿರಗಳಿಗೆ ದೂರವಾಣಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇನ್ನು ಕೆಲವು ತಾಲ್ಲೂಕು ಪ್ರವಾಸಿ ಮಂದಿರಗಳಿಗೆ ದೂರವಾಣಿ ವ್ಯವಸ್ಥೆ ಇಲ್ಲ. ಇಲ್ಲದೆ ಇರುವಂತಹ ಪ್ರವಾಸಿ ಮಂದಿರಗಳಿಗೆ ಸಂಪನ್ಮೂಲವನ್ನು ನೋಡಿಕೊಂಡು ದೂರವಾಣಿ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.

ಅಧ್ಯಕ್ಷರು.--ಪ್ರಶ್ನೆ ಸಂಖ್ಯೆ ೯ (೧೭೩) ಮಾನ್ಯ ಸದಸ್ಯರ ಪ್ರಶ್ನೆಯನ್ನು ಮುಂದೂಡಲಾಗಿದೆ.

ಕೋಲಾರ ಜಿಲ್ಲೆಯಲ್ಲಿರುವ ನೀರಾವರಿ ಯೋಜನೆಗಳು.

೪೧ (ಎ) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).--ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶ ಅಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ೬ ಮತ್ತು ೭ನೇ ಪಂಚವಾರ್ಷಿಕ ಯೋಜನೆಗಳಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಭಾರಿ, ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ, ಈ